# ಬರಿ ಬೆಳದಿಂಗಳಲ್ಲೋ ಅಣ್ಣಾ!

ಯಾವುದೇ ಅನುಭವ ಆಳವಾದಂತೆ ಅದು ತನ್ನಲ್ಲೇ ತಾನು ಮುಳುಗಿದಂತೆ ಇರುತ್ತೆ. ಆಶ್ಚರ್ಯವೆಂದರೆ ಹಾಗೆ ಸ್ವ-ಮಗ್ನವಾಗಿದ್ದಾಗಲೇ ತಾನು ಯಾವುದೋ ಇನ್ನೊಂದರ ಕಣ್ಣ ಹಿಡಿತದಲ್ಲಿ ಇರುವಂತೆಯೂ ತೋರಿಬರುತ್ತದೆ! ಅನುಭವವು ತೀವ್ರವಾದಾಗ ಅದು ವಾಸ್ತವವೇ ಆದರೂ ಕನಸಿನಂತೆಯೂ ಕಾಣುತ್ತದೆಯಲ್ಲವೆ? ಅದರಂತೆ. ಬೆಕ್ಕಿನ ಮರಿ ತನ್ನಲ್ಲೇ ತಾನಿದ್ದರೂ ತಾಯಿ ಬೆಕ್ಕು ಅದನ್ನು ಮೃದುವಾಗಿ ಕಚ್ಚಿಕೊಂಡು ಓಡಾಡುತ್ತಿರುತ್ತದೆ. ಅದರಂತೆ. ಅಂದರೆ ಆಳವಾದ ಅನುಭವವು ತಾನಲ್ಲದ ಇನ್ನೊಂದರ ಕಡೆಗೆ ಕಣ್ಣು ಹೊರಳಿಸುತ್ತಿರುತ್ತದೆ!

ಬೇಂದ್ರೆಯವರು ತಮ್ಮ ಬೆಳಗು ಪದ್ಯದಲ್ಲಿ ಬೆಳಗನ್ನು ಇಂದ್ರಿಯಗಮ್ಯವಾಗುವಂತೆ ಅದ್ಭುತವಾಗಿ ವರ್ಣಿಸಿ ಕೊನೆಗೆ ಇದು ಬರಿ ಬೆಳಗಲ್ಲೋ ಅಣ್ಣಾ ಎನ್ನುತ್ತಾರೆ. ಬೆಳಗಾಗಿಯೂ ಇನ್ನೇನೋ ಆಗಿದೆ ಎಂದಂತೆ. ಬೆಳಗಿನ ವಾಸ್ತವವು ಕನಸಿನ ಚಿತ್ರಗಳು ಕಾಣಿಸುವ Screen ಕೂಡ ಹೌದು ಎಂದಂತೆ. ಅಥವಾ ಬರಿ ಬೆಳಗಲ್ಲೋ ಎನ್ನುವಾಗ, ಧ್ವನಿಯ ಕಾಕುವನ್ನು ಸ್ವಲ್ಪ ಬದಲಿಸಿದರೆ ಈ ಬೆಳಗು ಬರಿಯ ಬೆಳಗೇ ಅಲ್ಲವೆ ಎಂದಂತೆಯೂ ಕೇಳಿಸಬಹುದು. ಮತ್ತು ಬರಿಯ ಬೆಳಕು ಎಂದಾಗ ಈ ಬೆಳಕು ಉದಯದಲ್ಲಿ ಕಾಣಿಸುವ ಹೊಂಬಣ್ಣದ ರಾಗರಂಜಿತವಾದ ಬೆಳಕಲ್ಲ, ಇಂದ್ರಿಯಗಳನ್ನು ಜುಮ್ಮುಗುಟ್ಟಿಸುವ ಬೆಳಕಲ್ಲ, ಇದು ಮುತ್ತು ಕರಗಿ ನೀರಾದಂತೆ ಹೊಳೆವ, ಬೆಳ್ಳಿಯ ನೀರಿನಂಥ, ಅಚ್ಚ ಬಿಳುಪಿನ, ಸರ್ವ ಶುಕ್ಲಾ ಸರಸ್ವತೀ ಎನ್ನುವಂಥ, ಶಾಂತಿಯೇ ರಸವಾದಂಥ ಬೆಳಕು ಎನ್ನುವ ಭಾವ ಕೂಡ ಹೊಳೆಯುತ್ತದೆ. ಆಗಲೂ ರಾಗರಂಜಿತವಾದ ಬೆಳಗಿನಿಂದ ತುಸು ಬೇರೆಯಾದ, ಅದರೊಳಗಿನಿಂದಲೇ ಮೂಡಿ ಬಂದ ಇನ್ನೊಂದು ಬೆಳಕೇ ಆಯಿತು.

ಈ ಹಿಂದಿನ ನನ್ನ ಅಂಕಣದಲ್ಲಿ ಬೆಳದಿಂಗಳ ಮಾಯೆಯ ಬಗ್ಗೆ ಬರೆದಿದ್ದೆ. ಪ್ರೀತಿ ಎಂಬುದು ಚಂದ್ರನ ದಯೆ ಎಂಬ ಕಾದಂಬರಿಯ (ಲೇಖಕರು: ಎಸ್.ಎಫ್ ಯೋಗಪ್ಪನವರ್) ನಮ್ಮೂರಿನ ಬೆಳದಿಂಗಳು ಎಂಬ ಮೊದಲ ಅಧ್ಯಾಯದ ಮಾತುಗಳನ್ನು ಉಲ್ಲೇಖ ಮಾಡಿದ್ದೆ. ಬೆಳದಿಂಗಳನ್ನು ಕಣ್ಣಿನಲ್ಲಿ ಕರಗುವಂತೆ ಬಣ್ಣಿಸಿ, ಲೋಕದ ಕಿರುಕುಳಗಳಿಂದ ಪಾರುಮಾಡಿ ಏಕಾಂತದ ದಟ್ಟಾರಣ್ಯ ನಿರ್ಮಿಸಿ ಪ್ರೇಮದ ಲೀಲೆಗೆ ಅನುವು ಮಾಡಿಕೊಟ್ಟ ಮಂದ ಬೆಳಕಿನ ಗಾಜಿನ ಬಲ್ಬು ಎಂದು ಬಣ್ಣಿಸಿ ಆ ಅಧ್ಯಾಯ, ಕೊನೆಯ ಈ ಎರಡು ಸಾಲುಗಳಿಂದ ಮುಗಿತಾಯವಾಗುತ್ತದೆ.

ಆ ಎರಡು ಸಾಲುಗಳು ಹೀಗಿವೆ: ಆದರೆ ಅಂದು ಅದು (= ಗಾಜಿನ ಬಲ್ಬಿನಂಥ ಬೆಳದಿಂಗಳು) ದೇವರು ಕಿತ್ತುಕೊಂಡ ಕಣ್ಣಿನಂತಿತ್ತು. ಆಕೆ ಸತ್ತ ಸುದ್ದಿ ಬಂದದ್ದು ಆ ದಿನದ ಆ ಬೆಳದಿಂಗಳಿನ ಸಮಯದಲ್ಲಾಗಿತ್ತು.

ಈ ಎರಡು ಸಾಲುಗಳು ಇದು ಬರಿ ಬೆಳದಿಂಗಳಲ್ಲೋ ಅಣ್ಣಾ ಎಂದಂತೆ ಕೇಳಿಸುತ್ತದೆ. ಇದೀಗ ಮಾಯೆಯ ಇನ್ನೊಂದು ಮುಖ.

ಬೆಳದಿಂಗಳೇನೋ ಹಾಗೆಯೇ ಇದೆ. ಆದರೆ ಅದನ್ನು ಅನುಭವಿಸಿ ಮುದಗೊಳ್ಳುವ ಮನಸ್ಸಿಗೆ ಸಾವಿನ ನೋವಿನ ಬಾಣ ತಾಗಿದೆ. ರಾಮಾಯಣದ ಪ್ರಾರಂಭದಲ್ಲಿ, ಸರಸದಲ್ಲಿದ್ದ ಕ್ರೌಂಚ ಹಕ್ಕಿಗೆ ಎಲ್ಲಿಂದಲೋ ಯಾರೋ ಎಸೆದ ಬಾಣ ತಾಗಿದಂತೆ! ಇದ್ದಕಿದ್ದಂತೆ ಚಂದ್ರನೊಳಗಿನ ಕಪ್ಪು ಕಲೆ ಬೆಳೆಯುತ್ತ ಹೋದಂತೆ! ಸ್ವಚ್ಛವಾದ ಕನ್ನಡಿಯಂತೆ ತಿಳಿಯಾದ ನೀರು ಕದಡಿ ರಾಡಿಯಾದಂತೆ!

ಸಾದೃಶ್ಯವನ್ನು ಅನುಭವಿಸಬಹುದು ಆದರೆ ವೈದೃಶ್ಯವನ್ನು ಅನುಭವಿಸೋದು ಹೇಗೆ? ಅನುರಕ್ತಿಯನ್ನು ಅನುಭವಿಸಬಹುದು. ಆದರೆ ವಿರಕ್ತಿಯನ್ನು ಅನುಭವಿಸೋದು ಹೇಗೆ? ನಿರೀಕ್ಷಿತವನ್ನು ಅನುಭವಿಸಬಹುದು ಆದರೆ ಅನಿರೀಕ್ಷಿತ ವಿಪರ್ಯಾಸವನ್ನು ಅನುಭವಿಸೋದು ಹೇಗೆ? ಬದುಕನ್ನು ಎಷ್ಟು ಕಷ್ಟವಾದರೂ ಅನುಭವಿಸಬಹುದು ಆದರೆ, ಸಾವನ್ನು ಅನುಭವಿಸೋದು ಹೇಗೆ?

ತಾನು ಊಹಿಸಲಾಗದೆ ಇದ್ದುದನ್ನು, ಪೂರ್ತಿ ಬೇರೆಯಾದುದನ್ನು, ಅದನ್ನು ಎದುರಿಸುವ ಯಾವ ಸಿದ್ಧತೆಯೂ ತನ್ನಲ್ಲಿ ಇಲ್ಲದೆ ಇದ್ದಾಗ, ಇದ್ದಕಿದ್ದಂತೆ ಅದು ಆಕ್ರಮಿಸಿದರೆ, ಆ ಆಕ್ರಮಣವನ್ನು ಅನುಭವಿಸೋದು ಹೇಗೆ?

ಇದು ಎಲ್ಲ ಕಲೆಗಳೂ ಎದುರಿಸಲೇ ಬೇಕಾದ ಸವಾಲು. ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕಲೆಯು ಮೂಲತ: ಒಂದು ವಿದ್ರೋಹದ ಸ್ವಭಾವದ್ದೂ ಆಗಿರುವುದರಿಂದ ಅದಕ್ಕೆ ತಾನು ಎದುರಿಸಬೇಕಾದ ಸವಾಲಿನ ಹೊಳಹೂ ಇರುತ್ತದೆ ಅಸ್ಪಷ್ಟವಾಗಿಯಾದರೂ- ಎನಿಸುತ್ತದೆ.

ಬೆಳದಿಂಗಳಿನ ಅನುಭವವನ್ನೇ, ಸಾವಿರ ವರ್ಷಕ್ಕೂ ಹಿಂದಿನ ಕವಿ ಬಾಣಭಟ್ಟ ತನ್ನ ಅಸದೃಶಕೃತಿ ಕಾದಂಬರಿಯಲ್ಲಿ ಹೇಗೆ ಬಣ್ಣಿಸಿದನೆಂದು ನೋಡಿದರೆ, ಕಲೆಗೆ ತಾನೆದುರಿಸಬೇಕಾದ ಸವಾಲಿನ ಹೊಳಹು ಇತ್ತೆಂದು ಅನ್ನಿಸುತ್ತದೆ!

ಇದು ಬಾಣಭಟ್ಟ, ಬೆಳದಿಂಗಳನ್ನು ಬಣ್ಣಿಸಿದ ಬಗೆ.

ರಾಹುವಿನ ಭಯದಿಂದ ಚಂದ್ರಮಂಡಲವನ್ನು ತೊರೆದು ಭೂಮಿಗಿಳಿದು ಬಂದ ಬೆಳದಿಂಗಳು ಇದು. ಮೂಡಣ ದಿಕ್ಕಿನಲ್ಲಿ ಬೆಳದಿಂಗಳು ಬೆಳಗಿತು. ಕತ್ತಲು ಒಂದು ಮದ್ದಾನೆ. ಚಂದ್ರಮನೆಂಬ ಸಿಂಹ ಈ ಆನೆಯ ಕುಂಭವನ್ನು ಭೇದಿಸಿತ್ತು. ಅದರಿಂದ ಸಿಡಿದ ಮುತ್ತಿನ ಚೂರ್ಣದಿಂದಲೇ ಈ ಬೆಳಕು ಬಂದಿರಬೇಕು. ಕಡಲಿನಲ್ಲಿದ್ದ ಕಲ್ಲೋಲಗಳ ಗಾಳಿಗೆ ತಡಿಯ ಮಳಲೆಲ್ಲ ಹಾರಿ ಮುಗಿಲು ಮುತ್ತಿತೇನೋ. ಅದರಿಂದಲೇ ಈ ಬೆಳಕು ಬಂದಿರಬೇಕು.

ಮೇಲೆದ್ದು ಬರುವಾಗ ಕಡಲಿನ ಹವಳದ ಬಣ್ಣ ತಾಗಿ ಚಂದ್ರನ ಮೈಯೂ ಕೆಂಪಾಗಿರಬೇಕು. ರತಿಕಲಹದಿಂದ ಕೋಪಗೊಂಡ ರೋಹಿಣಿಯ ಕಾಲ ಅಲತಿಗೆಯ ಕೆಂಪು ಚಂದ್ರನ ಮೋರೆಗೆ ತಾಗಿರಬೇಕು. ಉದಿಸುತ್ತಿರುವ ಚಂದ್ರನ ಕೆಂಬಣ್ಣದ ಮಂಡಲವನ್ನು ನಾನು ಕಂಡೆ. ಚಂದ್ರ ಎತ್ತರಕ್ಕೆ ಏರುವುದರಲ್ಲಿದ್ದ. ಬ್ರಹ್ಮಾಂಡವೇ ಒಂದು ದೇವಾಲಯ. ಅಲ್ಲಿ ಭಗವಂತನಿಗೆ ಅಭಿಷೇಚಿಸಿದ ಅಮೃತಜಲವನ್ನು ಕೊಂಡೊಯ್ಯುವ ಪ್ರಣಾಲಿಕೆ ಈ ಚಂದ್ರ ಮಂಡಲ. ಈ ಬೆಳದಿಂಗಳಲ್ಲಿ ನಾನು ಅತ್ತ ಹೋದೆ. ಯಾರೋ ಅಳುತ್ತಿದ್ದಾರೆ! ಗಂಡಸಿನ ದನಿ! ನನಗೆ ಸ್ವರದ ಗುರುತು ಹತ್ತಿತು. ಕಪಿಂಜಲ ಬೊಬ್ಬಿಡುತ್ತಿದ್ದಾನೆ. ಓ! ನನ್ನ ಕಿವಿ ಎಂಥ ಮಾತನ್ನು ಕೇಳಬೇಕಾಯಿತು! (ಬಾಣಭಟ್ಟನ ಕಾದಂಬರಿ. ಅನುವಾದ- ಶ್ರೀ ಬನ್ನಂಜೆ ಗೋವಿಂದಾಚಾರ್ಯ)

ಬೆಳದಿಂಗಳಿನ ಮುಗ್ಧ ರೋಮಾಂಚಕ ಅನುಭವ, ತೀವ್ರ ನೋವಿನ ಅನುಭವದತ್ತ ಒಯ್ಯುವುದನ್ನು ಬಾಣಭಟ್ಟನ ಕಲೆ ಮರೆತಿಲ್ಲ. ಅದನ್ನು ಮರೆಯುವಂತಿಲ್ಲ! ಮತ್ತೆ ಬೇಂದ್ರೆ ಮಾತು ನೆನಪಾಗುತ್ತೆ: ಅತ್ತಣಿಂದ ಬೇಟೆಗಾರ ಬರುವ ನಾನು ಬಲ್ಲೆ!

■ ತೋಷ

## ಮಾತೇ ಮುತ್ತು

★ ಯಾವ ಧರ್ಮವೂ ತನ್ನ ಉಳಿವು ಮತ್ತು ಉನ್ನತಿಗಾಗಿ ಕೊಲೆಗಳನ್ನು ಕಡ್ಡಾಯ ಮಾಡಿಲ್ಲ.

-ಡಾ.ಎ.ಪಿ.ಜೆ. ಅಬ್ದುಲ್ ಕಲಾಮ್

★ ಶಿಕ್ಷಣದ ಉದ್ದೇಶ ಕೇವಲ ಮಾಹಿತಿಗಳನ್ನು ಸಂಗ್ರಹಿಸುವುದಲ್ಲ; ಮನಸ್ಸನ್ನು ಕೇಂದ್ರೀಕರಿಸುವುದು.

-ಸ್ವಾಮಿ ವಿವೇಕಾನಂದ

★ ನಮ್ಮಲ್ಲಿ ಶಾಂತಿ ಇಲ್ಲವಾಗಿದ್ದಲ್ಲಿ, ಅದಕ್ಕೆ ಕಾರಣ- ನಾವು ಪರಸ್ಪರ ಸಂಬಂಧಿಗಳು ಎನ್ನುವುದನ್ನು ಮರೆತಿರುವುದು.

-ಮದರ್ ತೆರೇಸಾ

★ ಇತಿಹಾಸದಲ್ಲಿ ಯಾವ ನೈಜ ಬದಲಾವಣೆಗಳೂ ಕೇವಲ ಚರ್ಚೆಗಳಿಂದ ಸಾಧ್ಯವಾಗಿಲ್ಲ.

-ಸುಭಾಸ್‌ಚಂದ್ರ ಬೋಸ್

★ ಜೀವನದ ಗುರಿ ಮನಸ್ಸನ್ನು ನಿಯಂತ್ರಿಸುವುದಲ್ಲ; ಮನಸ್ಸನ್ನು ಸೌಹಾರ್ದತೆಯಿಂದ ರೂಪಿಸುವುದು. ಅದರಿಂದ ಮೋಕ್ಷ ಪಡೆಯುವುದಕ್ಕಲ್ಲ, ಅದನ್ನು ಜನರಿಗಾಗಿ ಬಳಸುವುದಕ್ಕೆ.

-ಭಗತ್‌ಸಿಂಗ್

★ ನದೀತೀರದಲ್ಲಿ ಮನೆ ಮಾಡುವುದಾದಲ್ಲಿ, ಮೊಸಳೆಗಳ ಜತೆಗೂ ಸ್ನೇಹ ಬೆಳೆಸಿಕೊಳ್ಳಿ.

-ಭಾರತದ ಗಾದೆ

★ ಒಮ್ಮೆ ಭರವಸೆಯನ್ನು ಆಯ್ಕೆ ಮಾಡಿಕೊಂಡರೆ ಸಾಕು; ಏನು ಬೇಕಾದರೂ ಸಾಧಿಸಬಹುದು.

-ಕ್ರಿಸ್ಟೋಫರ್ ರೀವ್

★ ಪ್ರತಿಯೊಬ್ಬ ಮನುಷ್ಯನಿಗೂ ನಿರ್ದಿಷ್ಟ ಸಂಖ್ಯೆಯ ಎದೆಬಡಿತಗಳಿವೆ. ನಾವು ಅವುಗಳಲ್ಲಿ ಒಂದನ್ನೂ ವ್ಯರ್ಥಗೊಳಿಸಬಯಸುವುದಿಲ್ಲ.

-ನೀಲ್ ಆರ್ಮ್‌ಸ್ಟ್ರಾಂಗ್